

ತನ್ನ 'ಗಂಗಮ್ಮನ ಕೋಣೆ'ಗಿಳಿಯುವ ಮಳೆನೀರು ಶೋಧಿಸುವ ಶೋಧಕವನ್ನು ಶುಚಿಗೊಳಿಸಿ ಜೋಡಿಸುತ್ತಿರುವ ಚಿತ್ರದುರ್ಗದ ಸಿದ್ದಣ್ಣ



ತುಮಕೂರಿನ ಪ್ರಾಧ್ಯಾಪಕ ಎಸ್.ಟಿ ಶ್ರೀನಿವಾಸ್ ಅವರ ಮನೆಯ ಭೂಗತ 'ಗಂಗಮ್ಮನ ಕೋಣೆ'ಗೆ ತಯಾರಿ

ಬಟ್ಟೆ–ಪಾತ್ರೆ ತೊಳೆಯಲು, ನೆಲ ಒರೆಸಲು – ಎಲ್ಲದಕ್ಕೂ ಇದೇ ನೀರು. ಇದು ಮುಗಿದಾಗ ಮಾತ್ರ ಕೊಳವೆಬಾವಿಯತ್ತ ಮುಖ. ಇಡೀ ಕುಟುಂಬದಲ್ಲೀಗ ನೀರ ನೆಮ್ಮದಿ.

ಇವರ ತಮ್ಮ ನಾಗಾರ್ಜುನ ಬೆಂಗಳೂರು ರಾಜರಾಜೇಶ್ವರಿ ನಗರದಲ್ಲಿ ಮನೆ ಕಟ್ಟಿಸಹೊರಟಿದ್ದರು. ಅಕ್ಕ ಅಲ್ಲಿಯೂ ತನ್ನ ಪ್ರಭಾವ ಬೀರಿದರು. ಅವರೂ 24 ಸಾವಿರ ಲೀಟರಿನ ಭೂಗತ ಟಾಂಕಿ ಮಾಡಿಸಿಕೊಂಡಿದ್ದಾರೆ. ಊರಿಗೆ ಹೋದಾಗ ಮಳೆ ಧಾರಾಕಾರವಾಗಿ ಸುರಿದು ದೂರಕ್ಕೆ ಓಡುವುದನ್ನು ಕಂಡಾಗ ಸುಲೋಚನಾರಿಗೆ ಸಂಕಟ. 'ಇಂಗುಗುಂಡಿ ಮಾಡಿಸ್ಕೋ ಅಥವಾ ಕೊಳವೆಬಾವಿ ರೀಚಾರ್ಜ್ ಆದರೂ ಮಾಡಿಸ್ಕೋ' ಎಂಬ ಸಲಹೆಯನ್ನು ತವರುಮನೆಯವರಿಗೆ ಮತ್ತೆಮತ್ತೆ ಕೊಡುತ್ತಿರುತ್ತಾರೆ.

ಮಳೆನೀರು ಈ ಗೃಹಿಣಿಗೆ ಎಷ್ಟು ಇಷ್ಟ ಎಂದು ತಿಳಿಯಬೇಕೇ? ಬೇಕಿದ್ದರೆ ನೀವು ಇವರ ತಾರಸಿ ಏರಬೇಕು. ಸನಿಹದ ಎರಡೂ ಮನೆಗಳ ಚಾವಣಿಯಿಂದ ಸುಲೋಚನಾ ನೀರು ಪಡೆಯುತ್ತಿದ್ದಾರೆ! ನೆರೆಕರೆಯವರ ಮನವೊಲಿಸಿದ ಕಾರಣ, ಎರಡೂ ಮನೆಗಳ ನೀರು ಇವರ ತಾರಸಿಗೇ ಬಂದು ಬೀಳುತ್ತದೆ. ಈ ಪೈಕಿ ಒಂದು ಕಟ್ಟಡ ನವೀಕರಣ ಆಗುತ್ತಿರುವುದರಿಂದ ಈಗ ಅಲ್ಲಿನ 'ಜಲಕೊಡುಗೆ' ನಿಂತಿದೆ.

## ರುಚಿಯೇ ಬೇರೆ

ಚಿತ್ರದುರ್ಗದ ಚಳ್ಳಕೆರೆಯ ದಸ್ತಾವೇಜು ಬರಹಗಾರ ದಿವಾಕರ್ ನಾಗಲೀಕರ್ ಕುಟುಂಬವನ್ನು ನೀರಿನ ಅಭಾವ ತೀವ್ರವಾಗಿ ಬಾಧಿಸಿತ್ತು. ಬೇಸಿಗೆಯಲ್ಲಿ ತಿಂಗಳಿಗೆ ಎರಡು ಟ್ಯಾಂಕರ್ ನೀರು ಕೊಳ್ಳಬೇಕಾಗಿತ್ತು. 2006ರಲ್ಲಿ ಹೊಸ ಮನೆ ಕಟ್ಟಿಸುವಾಗ ಹಾಲ್ ಕೆಳಗೆ 13 ಸಾವಿರ ಲೀಟರಿನ ನೀರಿನ ಕೋಣೆ ಮಾಡಿಸಿಕೊಂಡರು.

'ಆರೇಳು ತಿಂಗಳಿಂದ ಸರಿಯಾಗಿ ಮಳೆ ಇಲ್ಲ, ಆದರೂ ಟ್ಯಾಂಕರ್ ನೀರು ತರಿಸಿಕೊಳ್ಳಬೇಕಾಗಿಲ್ಲ. ಮಳೆನೀರು ಅರ್ಧ ವರ್ಷಕ್ಕೆ ಸಾಕಾಗುತ್ತಿದೆ. ಮತ್ತೆ ನಗರಪಾಲಿಕೆಯ ನೀರು. ಅಡುಗೆಗೂ, ಕುಡಿಯಲೂ ಮಳೆನೀರೇ ಅತ್ಯುತ್ತಮ. ಅದರ ರುಚಿಯೇ ಬೇರೆ. ಬೇಳೆ–ಕಾಳುಗಳೂ ಚೆನ್ನಾಗಿ ಬೇಯುತ್ತವೆ' ಎನ್ನುತ್ತಾರೆ ದಿವಾಕರ್.

'ಕಲಬುರ್ಗಿಯಲ್ಲಿ ಮನೆ ಕಟ್ಟುವಾಗಲೇ ಮಳೆನೀರು ತುಂಬುವ ಟಾಂಕಿ ಮಾಡ್ಕೊಂಡವರಲ್ಲಿ ಬಹುಶಃ ನಾನೇ ಮೊದಲಿಗ' ಎನ್ನುತ್ತಾರೆ ಗುತ್ತಿಗೆದಾರ, ಕೃಷಿಕ ಮಲ್ಲಿಕಾರ್ಜುನ ಕೆ. ಪಾಟೀಲ್. ಇವರು ಆಫೀಸು ರೂಮು ಮತ್ತು ಸಿಟ್‌ಔಟುಗಳ ಕೆಳಗೆ ಎರಡು ಟಾಂಕಾ ಮಾಡಿಕೊಂಡಿದ್ದಾರೆ. ಒಟ್ಟು ಸಾಮರ್ಥ್ಯ 35 ಸಾವಿರ ಲೀಟರ್. ಇವೆರಡೂ ತುಂಬಿದ ನಂತರದ ನೀರು ಇವರ ಕೊಳವೆಬಾವಿಯ ಗಂಟಲಿನೊಳಕ್ಕೆ ಇಳಿಯುತ್ತದೆ.

## ಅನಿವಾರ್ಯ ಪರಿಹಾರ

ಮಲ್ಲಿಕಾರ್ಜುನ ಮನೆ ಕಟ್ಟಿ ಎರಡು ವರ್ಷ ಆಯಿತಷ್ಟೇ. ಮಳೆನೀರು ಇರುವಷ್ಟು ಕಾಲ ಇವರು